## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ

**ಸಿ.ಸಿ.ನಂಃ 113/2018**

ಪಿರ್ಯಾದುದಾರರು : ರಾಜ್ಯದ ಪರವಾಗಿಃ ಪೊಲೀಸ್ ಉಪನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತ : ನಾಗರಾಜ್, **34** ವರ್ಷ,
ತಂದೆಃ ಕುಪ್ಪ ಸ್ವಾಮಿ,
ವಾಸಃ ಪಿ.ವಿ. ಕಂಪೌಂಡ್,
ಸರ್ಕಾರಿ ಶಾಲೆಯ ಬಳಿ, ಹೊಸ್ಮಾರು,
ಮಂಗಳೂರು ತಾಲ್ಲೂಕು.

### ಃ ದೋಷಾರೋಪಣೆಃ

**ಕು. ಮಾಲಾ ಸಿ.,** ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್?ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ಮೊದಲನೇದಾಗಿ, ಆರೋಪಿಯಾದ ನೀವು ಈ ಮೊದಲು ಬಾಡಿಗೆಗೆ ನಡೆಸಲು ಪಡೆದುಕೊಂಡಿರುವ ಟ್ರ್ಯಾಕ್ಟರ್ ವಾಹನವನ್ನು ಸಾಕ್ಷಿ-**2** ನೇ ಯಮುನಪ್ಪನವರು ಅದರ ಮಾಲೀಕರಿಂದ ಪಡೆದುಕೊಂಡಿರುತ್ತಾರೆ ಎಂಬ ದ್ವೇಷದಿಂದ, ತಕ್ಷೀರು ಮಾಡುವ ಸಮಾನ ಉದ್ದೇಶದಿಂದ ದಿನಾಂಕ **05-12-2016** ರಂದು ರಾತ್ರಿ **11-30** ಗಂಟೆಗೆ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮಂಗಳೂರು ತಾಲ್ಲೂಕು ನೆಲ್ಲಿಕಾರು ಗ್ರಾಮದ ಡೆಂಜರ್ ಎಂಬಲ್ಲಿ ಚಾಸಾ-**2** ನೇ ಯಮುನಪ್ಪರವರು ವಾಸವಾಗಿರುವ ಮನೆಗೆ ನೀವು ಅಕ್ರಮ ಪ್ರವೇಶ ಗೈದಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **447** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಚಾಸಾ-**2** ರವರಿಗೆ ಕೈಗಳಿಂದ ಹೊಡೆದು ಕಾಲಿನಿಂದ ತುಳಿದು ಹಲ್ಲೆ ನಡೆಸಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **323** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **504** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಸಾಕ್ಷಿ-2 ರವರನ್ನು ಉದ್ದೇಶಿಸಿ, "ಪಾದೆಕಲ್ಲಿನ ಮಾಲೀಕರಿಗೆ ನಮ್ಮ ವಿರುದ್ಧ ಚಾಡಿ ಹೇಳುತ್ತೀಯಾ, ನಿನ್ನನ್ನು ಬದುಕಲು ಬಿಡುವುದಿಲ್ಲ" ಎಂಬುದಾಗಿ ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **506** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಸಹಿ/-

ದಿನಾಂಕಃ **30-11-2022**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ **113/2018**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಪೊಲೀಸ್ ಉಪನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತ ಃ ನಾಗರಾಜ್, **34** ವರ್ಷ,

## <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ 2ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

ಉತ್ತರಃ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

ಸಹಿ/-

ದಿನಾಂಕಃ **30-11-2022**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ